**ದಿನಾಂಕಃ 15/06/2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ ಕೆ.ಬಿ. ವಕೀಲರಿಂದಃ**

1. ನನಗೆ ಈಗ 62 ವರ್ಷ ವಯಸ್ಸಾಗಿದೆ. ನನ್ನ ತಂದೆಯ ಹೆಸರು ಪಾಪಯ್ಯ. ನನ್ನ ತಂದೆಗೆ ನಾನು ಒಬ್ಬನೇ ಮಗ. ನನ್ನ ತಂದೆಗೆ ಲಲಿತಮ್ಮ ಮತ್ತು ಸುಮಿತ್ರ ಎಂಬ ಇಬ್ಬರು ಹೆಣ್ಣು ಮಕ್ಕಳಿದ್ದರು. ಲಲಿತಮ್ಮ ತೀರಿಕೊಂಡು 3 ವರ್ಷ ಕಳೆದಿದೆ. ಲಲಿತಮ್ಮನವರಿಗೆ ಮಕ್ಕಳಿಲ್ಲ, ಗಂಡ ಜೀವಂತ ಇದ್ದಾರೆ. ಅವರ ಗಂಡನ ಹೆಸರು ಗೊತ್ತಿಲ್ಲ. ಸುಮಿತ್ರ ಬದುಕಿದ್ದಾರೆ, ಅವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ.

2. ಈ ದಾವೆಯನ್ನು ನನಗೆ ಭಾಗ ಕೊಡಬೇಕೆಂದು ಹೂಡಿದ್ದೇನೆ. ಈ ದಾವೆಯನ್ನು ರಂಗಸ್ವಾಮಿ ಮತ್ತು ಸಂಪತ್‌ಕುಮಾರ್ ರವರ ವಿರುದ್ಧ ಹೂಡಿದ್ದೇನೆ. ದಾವೆಯಲ್ಲಿರುವ ವಿಚಾರಗಳು ಗೊತ್ತಾ ಎಂದರೆ ನನಗೆ ಓದಲು ಬರುವುದಿಲ್ಲ ಎಂದು ನುಡಿಯುತ್ತಾರೆ. ವಾದಪತ್ರದಲ್ಲಿರುವ ಅಂಶಗಳನ್ನು ನನ್ನ ಹೇಳಿಕೆ ಮೇರೆಗೆ ಬರೆದಿದ್ದು. ಈ ದಾವೆ ಹೂಡುವಾಗ ನನ್ನ ವಕೀಲರಿಗೆ ನನ್ನ ತಂಗಿಯರು ಜೀವಂತ ಇದ್ದಾರೆಂದು ತಿಳಿಸಿರಲಿಲ್ಲ. ಆ ರೀತಿ ತಿಳಿಸಲು ತೊಂದರೆ ಇರಲಿಲ್ಲ. ನನ್ನ ವಕೀಲರು ನನಗೆ ಅಕ್ಕತಂಗಿಯರು ಇದ್ದಾರಾ ಎಂದು ಕೇಳಲಿಲ್ಲ.

3. ನಾನು ಈ ದಾವೆಯನ್ನು ಸರ್ವೆ ನಂ.55/1ರ 10 ಗುಂಟೆ, ಸರ್ವೆ ನಂ. 55/22ರ 16 ಗುಂಟೆ ಜಮೀನಿಗೆ ಹೂಡಿದ್ದೇನೆ. ದಾವಾಸ್ವತ್ತಿನ ಪೂರ್ವಕ್ಕೆ ರಂಗಸ್ವಾಮಿಯವರ ಜಮೀನು, ಅವರ ಜಮೀನಿನ ಸರ್ವೆ ನಂಬರ್ ಗೊತ್ತಿಲ್ಲ. ಪಶ್ಚಿಮಕ್ಕೆ ನನ್ನದೇ ಜಮೀನು, ಆದರೆ ಅದರ ಸರ್ವೆ ನಂಬರ್ ಗೊತ್ತಿಲ್ಲ. ಪಶ್ಚಿಮ ದಿಕ್ಕಿನಲ್ಲಿರುವ ನನ್ನ ಜಮೀನನ್ನು ಈ ದಾವೆಯಲ್ಲಿ ಸೇರಿಸಿಲ್ಲ. ಆ ಸ್ವತ್ತು ಪಿತ್ರಾರ್ಜಿತ ಸ್ವತ್ತು. ಎಲ್ಲಾ ಜಮೀನುಗಳು ಭಾಗ ಆಗಿತ್ತು, ಆದರೆ ಈ ದಾವಾಸ್ವತ್ತಿನ ಜಮೀನು ಭಾಗ ಆಗಿಲ್ಲ. ಬೇರೆ ಜಮೀನುಗಳು ಭಾಗ ಆಗಿತ್ತು, ದಾವಾಸ್ವತ್ತು ಭಾಗ ಆಗಿಲ್ಲ ಎಂದು ನನ್ನ ವಕೀಲರಿಗೆ ತಿಳಿಸಿದ್ದೆ. ಈಗ ಹೇಳಿದ ವಿಚಾರವನ್ನು ನನ್ನ ವಾದಪತ್ರದಲ್ಲಿ ಹೇಳಿ ಬರೆಸಿದ್ದೇನೆ. ಮೊದಲು ಭಾಗವಾಗಿದ್ದ

ಜಮೀನುಗಳ ಸರ್ವೆ ನಂಬರ್ ಹೇಳಲು ಆಗುವುದಿಲ್ಲ. ನನ್ನ ತಾತನ ಕಾಲದಲ್ಲೇ ಜಮೀನುಗಳು ಭಾಗವಾಗಿತ್ತು. ಭಾಗವಾದ ಮೇಲೆ ಅವರವರ ಹೆಸರಿಗೆ ಖಾತೆಯಾಯಿತು. ಖಾತೆಯಾದ ನಂತರ ಆ ಸರ್ವೆ ನಂಬರ್ ಗಳಲ್ಲಿ ಅವರವರೇ ವ್ಯವಸಾಯ ಮಾಡುತ್ತಿದ್ದಾರೆ. ಭಾಗವಾದ ಆ ಜಮೀನುಗಳಲ್ಲಿ ನನಗೇನೂ ತಕರಾರು ಇಲ್ಲ. ಸಾಕ್ಷಿ ಮುಂದುವರೆದು ನನ್ನ ತಂದೆಯ ಹೆಸರಿಗೂ ಸಹ ಭಾಗವಾಗಿ ಖಾತೆಯಾಗಿದೆ ಎಂದು ನುಡಿಯುತ್ತಾರೆ. ನನ್ನ ತಾತನ ಭಾಗಕ್ಕೆ ಬಂದ ಜಮೀನುಗಳ ಸರ್ವೆ ನಂಬರ್ ಗೊತ್ತಿಲ್ಲ.

4. ನನ್ನ ತಂದೆಯ ತಂದೆಯ ಹೆಸರು ಸಣ್ಣಪ್ಪ. ನನ್ನ ತಾತನ ಹಿಸ್ಸೆಗೆ ಅಂದಾಜು 4 ಎಕರೆ ಒಳಗೆ ಅಂದರೆ ಮೂರು, ಮೂರೂವರೆ ಎಕರೆ ಜಮೀನು ಹಿಸ್ಸೆಗೆ ಬಂದಿರಬಹುದು. ನನ್ನ ತಾತನ ಭಾಗಕ್ಕೆ ಬಂದ ಜಮೀನು ನನ್ನ ತಂದೆಯ ಹೆಸರಿಗೆ ಬಂದು, ನಂತರ ನನ್ನ ತಾಯಿ-ವೆಂಕಟಮ್ಮ ರವರ ಹೆಸರಿನಲ್ಲಿ ಖಾತೆ ಇದೆ. ಈ ದಾವೆ ಹೂಡುವಾಗ ನನ್ನ ತಾಯಿ ವೆಂಕಟಮ್ಮ ಅನಾರೋಗ್ಯದಿಂದ ಇದ್ದರು. ಈ ದಾವೆ ಹೂಡಿದ 2-3 ವರ್ಷಗಳ ನಂತರ ನನ್ನ ತಾಯಿ ತೀರಿಕೊಂಡರು. ಈ ದಾವೆ ಹೂಡುವಾಗ ನನ್ನ ತಾಯಿ ಜೀವಂತ ಇದ್ದಾರೆಂದು ನನ್ನ ವಕೀಲರಿಗೆ ತಿಳಿಸಿದ್ದೆ. ನನ್ನ ತಾತ-ಸಣ್ಣಪ್ಪ ಬದುಕಿದ್ದಾಗ ನಾನು ಹುಟ್ಟಿರಲಿಲ್ಲ. ನಿಮ್ಮ ಮುತ್ತಾತ ಅಣ್ಣಯ್ಯ ರವರ ಮಕ್ಕಳು ದೊಡ್ಡಪ್ಪ ಮತ್ತು ಸಣ್ಣಪ್ಪ ಎಂದು ಹೇಗೆ ಗೊತ್ತಾಯಿತು ಎಂದರೆ ನನ್ನ ತಂದೆ ಪಿತೃಪಕ್ಷದಲ್ಲಿ ಅವರ ಹೆಸರುಗಳನ್ನು ತಿಳಿಸುತ್ತಿದ್ದರು ಹಾಗಾಗಿ ಗೊತ್ತಾಯಿತು ಎಂದು ನುಡಿಯುತ್ತಾರೆ. ದೊಡ್ಡಪ್ಪ ಮತ್ತು ಸಣ್ಣಪ್ಪರವರ ಮಧ್ಯೆ ನಡೆದ ಭಾಗದಲ್ಲಿ ದಾವಾಸ್ವತ್ತುಗಳು ದೊಡ್ಡಪ್ಪ ನವರ ಭಾಗದ ಸ್ವತ್ತುಗಳು ಎಂದರೆ ಸರಿಯಲ್ಲ. ಹಾಗೇ ಭಾಗವಾದ ನಂತರ ದೊಡ್ಡಪ್ಪ ನವರ ಹೆಸರಿಗೆ ಆದ ಖಾತೆ ನಿಮಗೆ ಗೊತ್ತಿತ್ತು ಎಂದರೆ ಸಾಕ್ಷಿಯು ಸಣ್ಣಪ್ಪ ಮತ್ತು ದೊಡ್ಡಪ್ಪ ಇಬ್ಬರ ಹೆಸರಿನಲ್ಲೂ ಖಾತೆ ಇತ್ತು ಎಂದು ನುಡಿಯುತ್ತಾರೆ. ಯಾವ ಇಸವಿಯಲ್ಲಿ ಅವರ ಹೆಸರುಗಳಿಗೆ ಖಾತೆ ಇತ್ತು ಎಂದು ನನಗೆ ಗೊತ್ತಿಲ್ಲ. ಹಿಸ್ಸಾ ಆಧಾರದ ಮೇಲೆ ದೊಡ್ಡಪ್ಪ ನವರ ಮಗ ತಿಮ್ಮಯ್ಯ ರವರಿಗೆ ದಾವಾಸ್ವತ್ತಿನ ಖಾತೆಯಾಯಿತು ಎಂದರೆ ಸರಿಯಲ್ಲ. ತಿಮ್ಮಯ್ಯರವರು ತೀರಿಕೊಂಡ ನಂತರ ಅವರ ಮಕ್ಕಳಾದ ಹೆಚ್.ಟಿ.ರಂಗಸ್ವಾಮಿ ಮತ್ತು ಹೆಚ್.ಟಿ.ಸಂಪತ್ ಕುಮಾರ್ ರವರ ಹೆಸರಿಗೆ ಖಾತೆ

ವರ್ಗಾವಣೆ ಆಯಿತು ಎಂದರೆ ಸರಿಯಲ್ಲ. ಹಿಸ್ಸೆ ಮಾಡಿಕೊಂಡ ಆಧಾರದ ಮೇಲೆ ಆ ಸ್ವತ್ತು ಸರ್ವೆ ನಂ.55/1 ಮತ್ತು 55/22 ಎಂದು ಆಗಿದೆ ಎಂದರ ಸರಿ, ಆದರೆ ಮೋಸದಿಂದ ಮಾಡಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ಅವರಿಗೆ ಆದ ಹಿಸ್ಸಾ ಆಸ್ತಿಯನ್ನು ಕಬಳಿಸಬೇಕೆಂದು ಮೋಸದಿಂದ ಹಿಸ್ಸೆ ಮಾಡಿಕೊಂಡಿದ್ದಾರೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿಯವರ ತಾತ-ದೊಡ್ಡಪ್ಪನಿಗೆ ಬಂದಂತಹ ಸ್ವತ್ತನ್ನು ತಂದೆಯ ಹೆಸರಿಗೆ ವರ್ಗಾಯಿಸಿಕೊಂಡು ನಂತರ ಅವರು ಹಿಸ್ಸೆ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ.

5. ದಾವಾಸ್ವತ್ತಿಗೆ ಸಂಬಂಧಿಸಿದ ದಾಖಲೆಗಳನ್ನು ಬೇರೆ ಸರ್ವೆ ನಂಬರ್ ಗಳಿಗೆ ಸಂಬಂಧಿಸಿದ ದಾಖಲೆಗಳನ್ನು ಹಾಜರುಪಡಿಸಿಲ್ಲ. ನಿಪಿ.7 ರಲ್ಲಿ ನಮೂದಿಸಿರುವ ಸ್ವತ್ತು ನಮಗೆ ಸೇರಿದ್ದು. ನಿಪಿ.8 ರಿಂದ 22 ರವರೆಗೂ ಹಾಜರುಪಡಿಸಿರುವ ದಾಖಲೆಗಳಲ್ಲಿರುವ ಸ್ವತ್ತುಗಳು ನನ್ನ ತಾತ-ಸಣ್ಣಪ್ಪನ ಹಿಸ್ಸೆಗೆ ಬಂದಂತಹ ಜಮೀನುಗಳು. ನನ್ನ ತಾತನ ಭಾಗದಲ್ಲಿ ಬಂದಂತಹ ಜಮೀನುಗಳನ್ನು ಬಿಟ್ಟು ಬೇರೆ ಯಾವುದೇ ಜಮೀನುಗಳು ಭಾಗಮಾಡಲು ಉಳಿದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳ ಭಾಗಕ್ಕೆ ಬಂದಂತಹ ಸ್ವತ್ತುಗಳನ್ನು ಕಬಳಿಸಬೇಕೆಂದು ಹಿಂದೆ ಆದಂತಹ ಭಾಗದ ಬಗ್ಗೆ ಗೊತ್ತಿದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ಮುಂದುವರೆದ ಪಾಟೀಸವಾಲನ್ನು ಪ್ರತಿವಾದಿಯ ಪರ ವಕೀಲರ ಕೋರಿಕೆ ಮೇರೆಗೆ ಮುಂದೂಡಲಾಯಿತು)

**ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು**

**ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.**

**ಹೆಚಿ.ನ್ಯಾ ಹಾಗೂ ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ.**